Members holding shares either in physical form or in dematerialized form, as on cut-off date of Friday, 11th September, 2026 may cast their vote electronically on the Ordinary and Special Business(es) as set out in the Notice of the 41st AGM through electronic voting system of CDSL. The Notice of AGM was sent electronically on 27th August, 2026. The remote e-voting shall commence on Monday, 14th September, 2026 at 9:00 a.m. IST and ends on Thursday, 17th September, 2026 at 5:00 p.m. IST. The remote e-voting module shall be disabled for voting after 5:00 p.m. on 17th September, 2026 and once the vote is cast by the member, the member shall not be entitled to change it subsequently.

Persons who have acquired shares and have become Member after sending of Notice and holding shares as on cut-off date i.e. 11th September, 2026, may follow the same instructions for e-voting as mentioned in the notice of AGM. Any Member who has exercised his right of vote through remote e-voting will be entitled to attend 41st AGM but will not be entitled to vote again in the meeting.

In accordance with the relevant circulars, the Notice of the 41st AGM and the Integrated Annual Report for the financial year 2025-26 comprising Financial Statements, Board's Report, Auditor's Report and other document sent by email to all those members, whose email address are registered with the Depository Participant(s) and / or RTA. The same is also available on the website of the Company www.aisglass.com and on the website of CDSL at www.evotingindia.com. The aforesaid documents are also available on website of Stock Exchanges i.e. BSE Limited and National Stock Exchange of India Limited at www.bseindia.com and www.nseindia.com respectively.

Further, in accordance with Regulation 36(1)(b) of the Listing Regulations, a letter providing a web-link and QR Code for accessing the Integrated Annual Report for the Financial Year 2025-26 and Notice of 41st Annual General Meeting of the Company has been sent to those shareholders whose email addresses are not registered with the Company / Registrar to an Issue and Shares Transfer Agent / Depositories.

**Helpdesk for Individual Shareholders holding securities in demat mode for any technical issues related to login through Depository i.e. CDSL and NSDL**

| Login type | Helpdesk details |
|---|---|
| Individual Shareholders holding securities in Demat mode with **CDSL** | Members facing any technical issue in login can contact CDSL helpdesk by sending a request at helpdesk.evoting@cdslindia.com or contact at toll free no. 1800 21 09911. |
| Individual Shareholders holding securities in Demat mode with **NSDL** | Members facing any technical issue in login can contact NSDL helpdesk by sending a request at evoting@nsdl.co.in or call at toll free no.: 022 - 4886 7000 and 022 - 2499 7000. |

To enable participation in the remote e-voting process by those shareholders to whom the Notice of the AGM could not be dispatched, may temporarily get their email ID registered at Company's email ID investorrelations@aisglass.com.

It is clarified that for permanent registration of email address, the members are however requested to register their email address, in respect of electronic holdings with the Depository through the concerned Depository Participants and in respect of physical holdings with the Company's Registrar to an Issue and Share Transfer Agent, MUFG Intime India Private Limited.

**Manner of casting vote(s) through e-voting:** The Company is providing remote e-voting facility ("remote e-voting") to all its members to cast their votes on all the resolutions set out in the Notice of AGM. The Company is also providing the facility of voting through e-voting system during the AGM ('e-voting') to those members who could not cast their vote(s) by remote e-voting. The detailed procedure for e-voting before the AGM ("remote e-voting"), as well as during the AGM ('e-voting') and participation in the AGM through VC / OAVM, has been provided in the Notes to the Notice of the AGM.

Members are requested to carefully read all the Notes set out in the Notice of the AGM and in particular, instructions for joining the AGM and manner of casting votes through e-voting.

**Registration of Bank Details for physical shareholders:**

The Members of the Company holding Equity Shares of the Company in physical form and who have not registered their bank details can get the same registered with MUFG Intime India Pvt. Ltd. (Email ID: investor.helpdesk@in.mpms.mufg.com). The members are requested to provide details such as Name, Folio Number, Certificate Number, PAN, Email ID along with the copy of the cheque leaf with the first named Shareholder's name imprinted in the face of the cheque leaf containing bank name and branch, type of account, bank account number, MICR details and IFSC code in PDF or JPEG format. It is very important that the shareholder should submit the request letter duly signed. Registrar to an Issue and Share Transfer Agent will verify the documents provided and will only take on records for all valid cases.

Pursuant to provisions of Section 91 of the Act and Regulation 42 of the Listing Regulations, the Company has fixed Friday, 11th September, 2026 as the Record Date, for taking record of the Member of the Company for the purpose of 41st Annual General Meeting ("AGM") of the Company and payment of Dividend, if declared at the AGM.

For **Asahi India Glass Limited**
Sd/-
**Gopal Ganatra**
**Executive Director**
**General Counsel & Company Secretary**
**Membership No. F7090**

**Date:** 27th August, 2026
**Place:** Gurugram

# ಬೆಂಗಳೂರು

## ಸೆ.26ರಿಂದ ರಾಷ್ಟ್ರ ಮಟ್ಟದ ಬೃಹತ್ ಮೇಳ: ಖಾದರ್

**ಬೆಂಗಳೂರು:** ಬೆಂಗಳೂರಿನ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಸೆಪ್ಟೆಂಬರ್ 26 ರಿಂದ 30ರ ವರೆಗೆ 5 ದಿನಗಳ ಕಾಲ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಹಯೋಗದಲ್ಲಿ 'ಲೋಕ್ ಸಂವರ್ಧನ್ ಪರ್ವ-2026' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದ ಅವರು, ರಾಷ್ಟ್ರ ಮಟ್ಟದ ಪ್ರದರ್ಶನಗಳು, ಪ್ಯಾನಲ್ ಚರ್ಚೆಗಳು, ಸಾಂಸ್ಕೃತಿಕ ಕಾರ್ಯಕ್ರಮ, ಆಹಾರ ಮೇಳವು ಕಾರ್ಯಕ್ರಮದ ವಿಶೇಷತೆಯಾಗಿದೆ. ಸಂಸ್ಕೃತಿ, ಪರಂಪರೆಗಳನ್ನು ಪರಸ್ಪರ ಪರಿಚಯ ಮಾಡಿಕೊಡುವಂತಹ ಕಾರ್ಯಕ್ರಮ ಇದಾಗಿದೆ. ಸೆ.26ರಂದು ಬೆಳಗ್ಗೆ ಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಕೇಂದ್ರ ಸಚಿವ ಕಿರಣ್ ರಿಜಿಜು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಬೆಳಗ್ಗೆ 9 ರಿಂದ ರಾತ್ರಿ 10 ಗಂಟೆಯವರೆಗೆ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. ಕಾರ್ಯಕ್ರಮದಲ್ಲಿ ಪ್ರತಿದಿನವೂ ಅಗತ್ಯ ಮಾಹಿತಿ ಒದಗಿಸುವ ವಿಚಾರದ ಕುರಿತು 3-4 ಪ್ಯಾನಲ್ ಚರ್ಚೆ ಇರಲಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ನಂಬರ್ 8277799990ಗೆ ಕರೆ ಮಾಡಬಹುದಾಗಿದೆ ಎಂದರು.

## ಎಸ್‌ಸಿ ಒಳಮೀಸಲು ದಲಿತರ ಏಕತೆಗೆ ಧಕ್ಕೆ: ಡಾ.ರತ್ನಾಕರ್

**ಬೆಂಗಳೂರು:** ಪರಿಶಿಷ್ಟ ಜಾತಿಗಳ (ಎಸ್‌ಸಿ) ಒಳಮೀಸಲಾತಿ ಹಾಗೂ ಒಳವರ್ಗೀಕರಣವು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಹೆಸರಿನಲ್ಲಿ ದಲಿತ ಸಮುದಾಯಗಳ ಒಗ್ಗಟ್ಟನ್ನು ಮುರಿಯುವ ಯತ್ನವಾಗಿದೆ ಎಂದು ಮಾಲ ಮಹಾನಾಡು ರಾಷ್ಟ್ರೀಯ ಅಧ್ಯಕ್ಷ ಡಾ. ಆರ್.ಎಸ್. ರತ್ನಾಕರ್ ಆರೋಪಿಸಿದ್ದಾರೆ. ನಗರದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಸಿ ಸಮುದಾಯಗಳನ್ನು ಒಳವರ್ಗೀಕರಣಕ್ಕೆ ಅವಕಾಶವಿಲ್ಲದಂತೆ ಸಂಸತ್ತಿನಲ್ಲಿ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿ ತರಬೇಕು. ಈ ಬೇಡಿಕೆ ಈಡೇರುವವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದರು. ಈ ವೇಳೆ ಜೆ.ಕೇಶವ ಪ್ರಸಾದ್, ಎಂ.ನರೇಶ್, ಜಿ.ಗೋವಿಂದಪ್ಪ, ಅರವಿಂದ್ ಎಚ್.ಎನ್. ಇತರರಿದ್ದರು.

## ಮಾಜಿ ಸಿಎಂ ದಿ.ನಿಜಲಿಂಗಪ್ಪ ಪುತ್ರಿ ಪ್ರತಿಭಾದೇವಿ ನಿಧನ

**ಬೆಂಗಳೂರು:** ರಾಜ್ಯದ ಮಾಜಿ ಸಿಎಂ ದಿ. ಎಸ್. ನಿಜಲಿಂಗಪ್ಪನವರ ಪುತ್ರಿ ಮತ್ತು ರಾಜ್ಯದ ನಿವೃತ್ತ ಮುಖ್ಯ



ಕಾರ್ಯದರ್ಶಿಯಾಗಿದ್ದ ದಿ.ಎಸ್.ಬಿ. ಮುದ್ದಪ್ಪ ಅವರ ಧರ್ಮಪತ್ನಿ ಪ್ರತಿಭಾದೇವಿ ಮುದ್ದಪ್ಪ (85) ಅವರು ಗುರುವಾರ ಮಧ್ಯಾಹ್ನ ಅನಾರೋಗ್ಯದಿಂದ ನಿಧನರಾದರು. ಪದವಿ ಕಾಲೇಜಿನ ಪ್ರಾಂಶುಪಾಲರಾಗಿ ಅವರು ನಿವೃತ್ತರಾಗಿದ್ದರು. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ವಿದ್ಯುತ್ ಸಂಪರ್ಕದ ಹೆಸರು ಆನ್‌ಲೈನ್‌ನಲ್ಲೇ ಬದಲಿಸಿ

### ಇನ್ಮುಂದೆ ಬೆಸ್ಕಾಂ ಕಚೇರಿಗಳಿಗೆ ಅಲೆದಾಡುವ ಅಗತ್ಯವಿಲ್ಲ | ನೂತನ ಡಿಜಿಟಲ್ ವೇದಿಕೆಗೆ ಇಂಧನ ಸಚಿವ ಕೆ. ಜೆ. ಜಾರ್ಜ್ ಚಾಲನೆ

■ **ಉದಯವಾಣಿ ಸಮಾಚಾರ**

**ಬೆಂಗಳೂರು:** ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳ ನಗರ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕಗಳ ಹೆಸರು ಬದಲಾವಣೆ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸಲಾಗಿದೆ. ಈ ಮೂಲಕ ಗ್ರಾಹಕರಿಗೆ ಸಂಪೂರ್ಣ ಡಿಜಿಟಲ್ ಮಾದರಿಯಲ್ಲಿ ಹೆಸರು ಬದಲಾವಣೆಯ ಸೌಲಭ್ಯ ಒದಗಿಸಿದ ದೇಶದ ಮೊದಲ ವಿದ್ಯುತ್ ವಿತರಣಾ ಸಂಸ್ಥೆ (ಎಸ್ಕಾಂ) ಎಂಬ ಹಿರಿಮೆಗೆ ಬೆಸ್ಕಾಂ ಪಾತ್ರವಾಗಿದೆ.

ಗುರುವಾರ ಈ ನೂತನ ಡಿಜಿಟಲ್ ವೇದಿಕೆಗೆ ಚಾಲನೆ ನೀಡಿ ಮಾತನಾಡಿದ ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ. ಜೆ. ಜಾರ್ಜ್, ಇದು ಮಾಹಿತಿ ತಂತ್ರಜ್ಞಾನ ಬಳಸಿಕೊಂಡು ಸಾರ್ವಜನಿಕರಿಗೆ ಅತ್ಯಂತ ಪಾರದರ್ಶಕ ಹಾಗೂ ಗುಣಮಟ್ಟದ ಸೇವೆ ನೀಡುವ ಇಲಾಖೆಯ ಮಹತ್ವದ ಯೋಜನೆಯಾಗಿದೆ.



ಬೆಸ್ಕಾಂ ಕಚೇರಿಯಲ್ಲಿ ನೂತನ ಡಿಜಿಟಲ್ ವೇದಿಕೆಗೆ ಇಂಧನ ಸಚಿವ ಕೆ.ಜೆ.ಜಾರ್ಜ್ ಚಾಲನೆ ನೀಡಿದರು. ಎಂಡಿ ಡಾ.ಎನ್ ಶಿವಶಂಕರ ಇತರರಿದ್ದರು.

ಗ್ರಾಹಕರು ಇನ್ಮುಂದೆ ಬೆಸ್ಕಾಂ ಕಚೇರಿಗಳಿಗೆ ಅಲೆದಾಡುವ ಅಗತ್ಯವಿಲ್ಲ. ತಾವು ಇದ್ದಲ್ಲಿಂದಲೇ ವಿದ್ಯುತ್ ಸಂಪರ್ಕದ ಹೆಸರು ಬದಲಾಯಿಸಿಕೊಳ್ಳಬಹುದು ಎಂದು ಹೇಳಿದರು.

ಜಿಬಿಎ ವ್ಯಾಪ್ತಿಯ ಇ-ಖಾತಾ ಮ್ಯೂಟೇಷನ್ ಹೊಂದಿರುವ ಗ್ರಾಹಕರು. ನಗರ ಪ್ರದೇಶದ ಬೆಸ್ಕಾಂ ನಗರ ವ್ಯಾಪ್ತಿಯಲ್ಲಿ ಆಸ್ತಿ ಇ-ಪಿಐಡಿ ಹೊಂದಿರುವ ಅಥವಾ ಹೊಂದಿಲ್ಲದ ಗ್ರಾಹಕರು ಈ ಸೌಲಭ್ಯ ಬಳಸಿಕೊಳ್ಳಬಹುದು. ಶೀಘ್ರದಲ್ಲೇ ಈ ಸೇವೆಯನ್ನು ಬೆಸ್ಕಾಂ ಗ್ರಾಮೀಣ ಪ್ರದೇಶಗಳಿಗೂ ಹಾಗೂ ರಾಜ್ಯದ ಉಳಿದ 4 ಎಸ್ಕಾಂಗಳಿಗೂ ವಿಸ್ತರಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

**ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಕೆ ಹೇಗೆ?**

ಬೆಸ್ಕಾಂ RAPDRP Web Self-Service (WSS) ಪೋರ್ಟಲ್ ಮೂಲಕ ಅರ್ಜಿ ಸಲ್ಲಿಕೆ, ವಿವರಗಳ ಅಪ್‌ಲೋಡ್, ಇ-ಸ್ಟಾಂಪಿಂಗ್ ಮತ್ತು ಇ-ಸೈನ್ ಪ್ರಕ್ರಿಯೆ ಪೂರ್ಣಗೊಳಿಸಬಹುದು. 100 ರೂ. ಅರ್ಜಿ ಶುಲ್ಕ ಹಾಗೂ 1,194 ರೂ. ಇ-ಸ್ಟಾಂಪ್/ಇ-ಸೈನ್ ಶುಲ್ಕವನ್ನು ಪೋರ್ಟಲ್‌ನಲ್ಲೇ ಪಾವತಿಸಬೇಕು. ಡಿಜಿಟಲ್ ಸಹಿ ಪೂರ್ಣಗೊಂಡ ತಕ್ಷಣ ಅಧಿಕೃತ ದೃಢೀಕರಣ ಪತ್ರವನ್ನು ತಕ್ಷಣವೇ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈ ಹಿಂದೆ ಹೆಸರು ಬದಲಾವಣೆಗಾಗಿ ಕ್ರಯಪತ್ರ, ನಿರಾಕ್ಷೇಪಣಾ ಪತ್ರ, ಆಸ್ತಿ ತೆರಿಗೆ ರಶೀದಿ ಹಾಗೂ ನಷ್ಟ ಪರಿಹಾರ ಪತ್ರಗಳಂತಹ ಭೌತಿಕ ದಾಖಲೆಗಳನ್ನು ಹಿಡಿದು ಕಚೇರಿಗೆ ಅಲೆಯಬೇಕಿತ್ತು. ಆದರೆ ನೂತನ ವ್ಯವಸ್ಥೆಯಲ್ಲಿ ಯಾವುದೇ ಭೌತಿಕ ಕಾಗದಪತ್ರಗಳ ಅಗತ್ಯವಿರುವುದಿಲ್ಲ ಎಂದು ತಿಳಿಸಿದರು.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ.ಎನ್. ಶಿವಶಂಕರ ಮಾತನಾಡಿ, ಪ್ರಾಯೋಗಿಕವಾಗಿ ಆರಂಭಗೊಂಡ ದಿನದಿಂದ 31,000ಕ್ಕೂ ಹೆಚ್ಚು ಸಂಪರ್ಕಗಳ ಹೆಸರು ಬದಲಾವಣೆ ಪೂರ್ಣಗೊಂಡಿದ್ದು, ವಾರಕ್ಕೆ 2,000ಕ್ಕೂ ಹೆಚ್ಚು ಅರ್ಜಿಗಳು ವಿಲೇವಾರಿಯಾಗುತ್ತಿವೆ. ಮಾನವ ಹಸ್ತಕ್ಷೇಪವಿಲ್ಲದೆ ಕ್ಷಣಾರ್ಧದಲ್ಲಿ ಈ ಸೇವೆ ದೊರೆಯಲಿದೆ ಎಂದು ಹೇಳಿದರು.

## ಅಲ್ಪಸಂಖ್ಯಾತರ ಶಿಕ್ಷಣಕ್ಕೆ ಒತ್ತು ನೀಡಲು ವಿಷನ್ ಕಮಿಟಿ: ಸಚಿವ

### ತಂತ್ರಜ್ಞಾನ ಆಧಾರಿತ ಕಲಿಕೆಗೆ ಹೊಸ ರೂಪ: ಖಾದರ್



ಬೆಂಗಳೂರಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಚೇರಿಯಲ್ಲಿ ಕಾರ್ಯ ಚಟುವಟಿಕೆಗಳ ಪರಿಶೀಲನೆ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಸಚಿವ ಯು.ಟಿ.ಖಾದರ್ ಮಾತನಾಡಿದರು.

■ **ಉದಯವಾಣಿ ಸಮಾಚಾರ**

**ಬೆಂಗಳೂರು:** ರಾಜ್ಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇಂದಿನ ತಂತ್ರಜ್ಞಾನ ಆಧಾರಿತ ಕಾಲಘಟ್ಟದ ವ್ಯವಸ್ಥೆಯನ್ನು ಅಳವಡಿಸಿಕೊಂಡು ಹೊಸ ರೂಪ ನೀಡಲು ವಿಷನ್ ಕಮಿಟಿ ರಚಿಸಲಾಗಿದೆ ಎಂದು ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ.

ನಗರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಚೇರಿಗೆ ಭೇಟಿ ನೀಡಿ, ಇಲಾಖೆಯ ವಿವಿಧ ಕಾರ್ಯ ಚಟುವಟಿಕೆ, ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದರು. ಬಳಿಕ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಇಲಾಖೆಗೆ ಸಂಬಂಧಿಸಿದಂತೆ ಶಿಕ್ಷಣದಲ್ಲಿ ಯಾವ ರೀತಿಯಾಗಿ ಹೊಸ ಬದಲಾವಣೆ ತರಬಹುದು, ಈ ಸಂಬಂಧ ಶಿಕ್ಷಕರಿಗೆ ಏನೆಲ್ಲ ಮಾಹಿತಿ ನೀಡಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ವಿಷನ್ ಸಮಿತಿ ರಚಿಸಲಾಗಿದೆ. ರಾಜ್ಯಸಭೆಯ ಸದಸ್ಯ ಮನ್ಸೂರ್ ರೆಹಮಾನ್ ಖಾನ್ ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಅವರು ನೀಡುವ ವರದಿಗೆ ಅನುಗುಣವಾಗಿ ನಮ್ಮ ಇಲಾಖೆ ತಮ್ಮ ಕೆಲಸ ನಿರ್ವಹಿಸುತ್ತದೆ. ಈ ಸಮಿತಿಯಲ್ಲಿ ಶಿಕ್ಷಣ ತಜ್ಞರು, ಸಾಮಾಜಿಕ ಮುಖಂಡರುಗಳು ಇರಲಿದ್ದಾರೆ ಎಂದು ತಿಳಿಸಿದರು.

## ಕೆ.ಆರ್.ಪುರ ಕ್ಷೇತ್ರದ ಸ್ತ್ರೀಯರಿಗೆ ಬಾಗಿನ ಅರ್ಪಿಸಿದ ಶಾಸಕ ಬೈರತಿ



ಟಿ.ಸಿ.ಪಾಳ್ಯದಲ್ಲಿ ಶಾಸಕ ಬೈರತಿ ಬಸವರಾಜ ಅವರು ಮಹಿಳೆಯರಿಗೆ ಬಾಗಿನ ಅರ್ಪಿಸಿದರು. ಫಾದರ್ ಫ್ರಾನ್ಸಿಸ್, ಅಂಥೋಣಿಸ್ವಾಮಿ ಇದ್ದರು.

■ **ಉದಯವಾಣಿ ಸಮಾಚಾರ**

**ಕೆ.ಆರ್.ಪುರ:** ಪ್ರತಿ ವರ್ಷ ಮಹಿಳೆಯರನ್ನು ಗೌರವಿಸುವ ಉದ್ದೇಶದಿಂದ ಸಾವಿರಾರು ಮಹಿಳೆಯರಿಗೆ ಬಾಗಿನ ನೀಡುವಂತಹ ಕಾರ್ಯಕ್ರಮ ರೂಪಿಸಿದ್ದೇವೆ ಎಂದು ಶಾಸಕ ಬೈರತಿ ಬಸವರಾಜ ಹೇಳಿದರು.

ಕೆ.ಆರ್.ಪುರ ಸಮೀಪದ ಟಿ.ಸಿ.ಪಾಳ್ಯದಲ್ಲಿ ಗೌರಿ- ಗಣೇಶ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಮಹಿಳೆಯರಿಗೆ ಅರಿಶಿನ, ಕುಂಕುಮ, ಬಳೆಯ ಜೊತೆ ಸೀರೆ ನೀಡಿ ಬಾಗಿನ ಅರ್ಪಿಸಿ ಮಾತನಾಡಿದರು.

ಕಳೆದ 15 ವರ್ಷಗಳಿಂದ ಸತತವಾಗಿ ನಮ್ಮ ಕುಟುಂಬ ಕ್ಷೇತ್ರದ ಮಹಿಳೆಯರಿಗೆ ಬಾಗಿನ ಅರ್ಪಿಸುತ್ತ ಬಂದಿದೆ. ಅಧಿಕಾರ ಇರಲಿ ಇಲ್ಲದಿರಲಿ ಬಾಗಿನ ಅರ್ಪಿಸುವುದು ನಿಂತಿಲ್ಲ. ಸದಾಕಾಲವೂ ನಿಮ್ಮ ಕಷ್ಟ ಸುಖಗಳಲ್ಲಿ ಭಾಗಿಯಾಗಿರುತ್ತೇನೆ ಎಂದು ತಿಳಿಸಿದರು. ಈ ವೇಳೆ ಫಾದರ್ ಫ್ರಾನ್ಸಿಸ್, ಮಾಜಿ ಪಾಲಿಕೆ ಸದಸ್ಯ ಪಿ.ಜೆ. ಅಂಥೋಣಿಸ್ವಾಮಿ, ಜೆಸಿಬಿ ಅಂತೋಣಿ, ಕೆ.ಪಿ.ಕೃಷ್ಣ ಮತ್ತಿತರರಿದ್ದರು.

## ಶ್ರೀ ಗುರುರಾಯರ ಅನುಗ್ರಹ ಆಲ್ಬಮ್ ಸಾಂಗ್ಸ್ ಬಿಡುಗಡೆ



ದೀಪು ಚಾರ್ವಿಕ ಗೌಡ ಪ್ರೊಡಕ್ಷನ್, ಚಂದನ್ ಗೌಡ ನಿರ್ಮಾಣದ ಶ್ರೀ ರಾಯರ ಅನುಗ್ರಹ ಪೋಸ್ಟರ್ ಬಿಡುಗಡೆಗೊಳಿಸಿದ ಮುನಿರಾಜು.

■ **ಉದಯವಾಣಿ ಸಮಾಚಾರ**

**ಪೀಣ್ಯ ದಾಸರಹಳ್ಳಿ:** ರಾಘವೇಂದ್ರ ಗುರುಸಾರ್ವಭೌಮರ 355ನೇ ಆರಾಧನಾ ಸಪ್ತರಾತ್ರೋತ್ಸವ ಪ್ರಯುಕ್ತ ಶ್ರೀ ಗುರುರಾಯರ ಅನುಗ್ರಹ ಆಲ್ಬಮ್ ಸಾಂಗ್ ನ ಪೋಸ್ಟರ್ ಅನ್ನು ಶಾಸಕ ಎಸ್. ಮುನಿರಾಜು ಬಿಡುಗಡೆಗೊಳಿಸಿದರು.

ಕ್ಷೇತ್ರದ ಶೆಟ್ಟಿಹಳ್ಳಿಯ ಶಾಸಕರ ಕಚೇರಿಯಲ್ಲಿ ಮಾತನಾಡಿದ ಅವರು, ದೀಪು ಚಾರ್ವಿಕ ಗೌಡ ಪ್ರೊಡಕ್ಷನ್, ಚಂದನ್ ಗೌಡ ನಿರ್ಮಾಣದ ಶ್ರೀ ರಾಯರ ಅನುಗ್ರಹ ಪೋಸ್ಟರ್ ಅನ್ನು ಬಿಡುಗಡೆಗೊಳಿಸಲಾಗಿದೆ. ರಾಯರನ್ನು ನಂಬಿ ಯಾರು ಕೆಟ್ಟವರಿಲ್ಲ. ರಾಯರ ಸ ಂ ಗ ೀ ತ ವ ನ ್ನ ಬಿಡುಗಡೆಗೊಳಿಸುತ್ತಿರುವುದು ನಮಗೆ ಸಂತಸ ತಂದಿದೆ. ರಾಜ್ಯದ ಮನೆ ಮನಗಳಲ್ಲಿ ಈ ಸಾಂಗ್ ಪ್ರಖ್ಯಾತಿ ಹೊಂದಲಿ ಎಂದು ಆಶಿಸಿದರು. ಈ ವೇಳೆ ಸೂರಜ್ ಫೌಂಡೇಷನ್ ಸಂಸ್ಥಾಪಕಿ ಸುಜಾತಾ ಮುನಿರಾಜು, ನಿರ್ಮಾಪಕ ಚಂದನ್ ಗೌಡ, ಚಿತ್ತಣ್ಣ ಮಧುಸೂಧನ್, ಚೇತನ್, ವಿನೋದ್ ಕುಮಾರ್ ಇತರರಿದ್ದರು.

IN THE COURT OF THE VII ADDITIONAL CITY CIVIL AND SESSIONSJUDGE, BENGALURU (CCH19)
O.S.No. 1825/2021
Between: Sri L. Harish s/o S.Lakshmana Subbanna aged about 29 year r/a No.29/1A. New Bank Colony Konanakunte Anjanapura Main Road BENGALURU-560062. ...Plaintiffs
And: Smt. Nagamma & others ...DEFENDANTS
Notice to be impleaded as additional defendant No.7
7, Sri Janarahan M Aged about 43 years. S/o Late Munimaraiah, R/at No.114, Saraki Veerabhadraswamy Temple Road, JP Nagar 1 Phase, Bangalore-560078
Notice by Paper Publication to be impleaded as additional defendant No.7
WHEREAS, the Plaintiff suit for the relief of declaration and permanent injunction against the defendants in respect of schedule property You are hereby summoned to appear in this Hon'ble Court in person or by a pleader duty instructed and able to answer all material questions relating to the suit or who shall be accompanied by some persons able to answer all such questions on the 16th day of sep 2026 at 11.00am to answer the claim,
SCHEDULE PROPERTY
All that piece and parcel of the site property bearing Site No. 16. Khatha No. 155/48, carved out of Sy.No. 155/48 measuring East to West: 30' and North to South: 40' now comes under BBMP limits of Kothinur and bounded on the East by: Property bearing No.17, West by: Property bearing No. 15, North by. Property bearing No 27, South by Roadsituated at Kothnur village. Uttarahalli Hobli, Bengaluru South Taluk Take notice that, in default of your appearance on the day above mentioned, the suit will be heard and determined in your absence. Given under my hand and the seal of the Court, this 24 day of August 2026.
By The Order Of The Court Senior Shirasthedar
City Civil And Bengalru
Advocate Address:
Y.N.Sathyanarayana Rao. Advocate
No. 13, 1st Floor, Vasavi Sampooma Chamber Vasavi Temple Road. V.V. Puram Bengaluru-560 004,

IN THE COURT OF HON'BLE 72nd ADDITIONAL CITY CIVIL JUDGE, MAYO HALL, AT BANGALORE. (CCH-73)
P & SC No. 25057/2025
BETWEEN: Sri. T. PENCHALARAO, aged about 53 years, S/o T. Ramaiah, Residing at no.135, 5th cross, Near Sri Sai Clinic, Kammagondanahalli, Jalahalli west, Bangalore-560 015 ...PETITIONER
AND: -NIL- ...RESPONDENT
NOTICE TO PROPOSED RESPONDENTS NO.1 TO 3 UNDER ORDER 5 RULE 20 OF CPC.
1. Smt. Jayanthi, D/o late R.Penchalaiah, age about 48 years, Residing at no.24, 20th C Cross, Ejipura, Vivek Nagar post, Bangalore-560047.
2. Sri. Sridhar, S/o late R.Penchalaiah, age about 44 years, Residing at no.47, 5th Cross, Viveknagar, Further Extension, Bangalore-560047.
3. Smt. Sujatha, D/o late R. Penchalaiah, age about 36 years, Residing at 89, 9th main, Peenya, Jalahalli West, Bangalore-560015.
Whereas the petitioner has instituted the above petition for Probate of WILL under section 276 of Indian Succession act of the suit property. The R. Penchalaiah, has died on 06.07.2025.
Therefore the proposed respondents no.1 to 3 have any claim / objections, they are to appear before the Hon'ble 72nd Additional City Civil Judge, Mayohall, at Bangalore. (CCH-73), in person or through their Advocate or duly authorized agent in support of their defence to show cause on 19/09/2026 at 11:00 A.M., without fail.
Take notice that in case of default the case will be decided and determined in your absence.
SCHEDULE PROPERTY.
All the piece and parcel of the house property bearing site no.772, Sy no.18, of J B Kaval Village, Yelahanka hobli, Bangalore north Taluk, now within in the limits of BBMP ward no.12, Shetty Halli ward, bearing Katha no.18, 12th main road, Kalanagar, Kammagondanahalli, Bangalore, measuring east to west 22 feet and north to south 22 feet in all totally 484 square feet along with RCC roofed construction in ground floor thereon and bounded on: East by: Ramaiah House, West by: Road, North by: M. Ramaiah House, South by: Madaiah House.
Given under my hand and seal of this court on this 25/08/2026 at Bangalore.
By order of the Court, Deputy Registrar, City Civil Court, Mayo Hal Unit, Bengaluru
M. NAGARAJ, Advocate
No.16, 1st floor, 14th Cross, Cubbonpet, Bangalore- 02.



ಜಯನಗರದ ಎನ್.ಎಂ.ಕೆ, ಆರ್.ವಿ ಕಾಲೇಜಿನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಗುರುವಾರ 'ಯಶವಂತ ಚಿತ್ತಾಲ ಅವರ ಕಥೆಗಳ' ಕುರಿತು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಬರಹಗಾರ ಬಿ.ಎಂ.ಹನೀಫ್ ಅವರನ್ನು ಸನ್ಮಾನಿಸಲಾಯಿತು. ಪ್ರಾಧಿಕಾರದ ಅಧ್ಯಕ್ಷೆ ಡಾ.ಮಾನಸ, ಕಾಲೇಜಿನ ಪ್ರಾಂಶುಪಾಲರಾದ ಡಾ. ಸುಚಿತ್ರಾ ಆರ್. ಹಾಗೂ ಡಾ.ಸಂಧ್ಯಾ ಹೆಗಡೆ ಇದ್ದರು.

ಸಾರ್ವಜನಿಕ ಪ್ರಕಟಣೆ
ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಾವು-ಅಂದರೆ 'ಕಂಪನಿಗಳ ಕಾಯ್ದೆ, 2013'ರ ಅಡಿಯಲ್ಲಿ ನೋಂದಾಯಿಸಲ್ಪಟ್ಟಿರುವ ಮತ್ತು 4/5, 1ನೇ ಮಹಡಿ, ಪ್ಲಾಟ್-11/13, ಬೋಟಾವಾಲಾ ಬಿಲ್ಡಿಂಗ್, ಹಾರ್ನಿಮನ್ ಸರ್ಕಲ್, ಫೋರ್ಟ್, ಮುಂಬೈ-400001 ಇಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿರುವ 'ಟ್ರಿಲ್ ಕನ್‌ಸ್ಟ್ರಕ್ಷನ್ಸ್ ಲಿಮಿಟೆಡ್' ಎಂಬ ಕಂಪನಿಯು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ತಣ್ಣೀರಹಳ್ಳಿ ಗ್ರಾಮದಲ್ಲಿರುವ (ಈ ಮೊದಲು ಸರ್ವೆ ನಂ. 11 ರಲ್ಲಿನ 13 ಎಕರೆ 38 ಗುಂಟೆಗಳ ಪೈಕಿ 12 ಎಕರೆ 39 ಗುಂಟೆ ವಿಸ್ತೀರ್ಣದ ಜಮೀನಾಗಿದ್ದು), ಪುರಸಭೆ ಸಂಖ್ಯೆ 2, ಎಂ.ಇ.ಎಸ್. ರಸ್ತೆ, ಜಾಲಹಳ್ಳಿ, ವಾರ್ಡ್ ಸಂಖ್ಯೆ 1- ಎಚ್.ಎಂ.ಟಿ, ಬೆಂಗಳೂರು (ಪಿಐಡಿ ಸಂಖ್ಯೆ 1-56-2) ವಿಳಾಸದ ಸ್ಥಿರಾಸ್ತಿಯ ಮಾಲೀಕರಾಗಿದ್ದಾರೆ.
ಕೆಳಗೆ ಪಟ್ಟಿ ಮಾಡಲಾದ ಸದರಿ ದಾಖಲೆಗಳ ಮೂಲ ಪ್ರತಿಗಳು ತಪ್ಪಿಹೋಗಿವೆ/ಕಳೆದುಹೋಗಿವೆ ಮತ್ತು ಅವುಗಳನ್ನು, ನಾವಾಗಲಿ ಅಥವಾ ನಮ್ಮ ಹಿಂದಿನ ಹಕ್ಕುದಾರರಾಗಲಿ ಪತ್ತೆಹಚ್ಚಲು ಸಾಧ್ಯವಾಗಿಲ್ಲ.
ಕೆಳಗೆ ಪಟ್ಟಿ ಮಾಡಲಾದ ದಾಖಲೆಗಳು ಯಾರ ಬಳಿಯಾದರೂ ಇದ್ದರೆ, ಅವುಗಳನ್ನು ತಮ್ಮ ಬಳಿಯೇ ಇರಿಸಿಕೊಳ್ಳಲು ಅವರಿಗೆ ಹಕ್ಕಿರುವುದಿಲ್ಲ. ಆದ್ದರಿಂದ, ದಯವಿಟ್ಟು ಆ ದಾಖಲೆಗಳನ್ನು ತಕ್ಷಣವೇ ಕೆಳಗಿನ ವಿಳಾಸಕ್ಕೆ ಹಿಂತಿರುಗಿಸುವಂತೆ ಕೋರಲಾಗಿದೆ. ಮೂಲ ದಾಖಲೆಗಳನ್ನು ಹಸ್ತಾಂತರಿಸುವ ಪ್ರಕ್ರಿಯೆಯಲ್ಲಿ ಆ ವ್ಯಕ್ತಿಗಳಿಗೆ ಉಂಟಾಗುವ ಯಾವುದೇ ಸಮಂಜಸವಾದ ವೆಚ್ಚವನ್ನು ಭರಿಸಲು ನಾವು ಈ ಮೂಲಕ ಭರವಸೆ ನೀಡುತ್ತೇವೆ.
ಕಾಣೆಯಾಗಿರುವ/ಕಳೆದುಹೋಗಿರುವ ಮೂಲ ಸ್ವಾಮ್ಯದ ದಾಖಲೆಗಳ ಪಟ್ಟಿ:
ಟಾಟಾ ಆಯಿಲ್ಸ್ ಮಿಲ್ಸ್ ಕಂಪನಿ ಲಿಮಿಟೆಡ್‌ನಿಂದ ಶ್ರೀ ಸಿ. ಭೀಮ ರಾವ್ ಅವರ ಪರವಾಗಿ 17.08.1964 ರಂದು ಜಾರಿಗೊಳಿಸಲಾದ ಜನರಲ್ ಪವರ್ ಆಫ್ ಅಟಾರ್ನಿ.
ಸಹಿ/- ಮೆ॥ ಟ್ರಿಲ್ ಕನ್‌ಸ್ಟ್ರಕ್ಷನ್ಸ್ ಲಿಮಿಟೆಡ್
4/5, 1ನೇ ಮಹಡಿ, ಪ್ಲಾಟ್-11/13, ಬೋಟಾವಾಲಾ ಬಿಲ್ಡಿಂಗ್, ಹಾರ್ನಿಮನ್ ಸರ್ಕಲ್, ಫೋರ್ಟ್, ಮುಂಬೈ-400001
ದಿನಾಂಕ: 28.08.2026

leapfrog Engineering Services
ಲೀಪ್‌ಫ್ರಾಗ್ ಎಂಜಿನಿಯರಿಂಗ್ ಸರ್ವಿಸಸ್ ಲಿಮಿಟೆಡ್
CIN: L74210KA2005PLC036274
ನೋಂದಾಯಿತ ಕಛೇರಿ: ನಂ. 496, ಚೈತನ್ಯ ಧೃತಿ ರುದ್ರೇಶ್, 6ನೇ ಮುಖ್ಯರಸ್ತೆ, 8ನೇ ಕ್ರಾಸ್, ವಿಜಯ ಬ್ಯಾಂಕ್ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560076
ಮೊಬೈಲ್: +91 9606084822, ಇ-ಮೇಲ್: CS@lesgroup.in, ವೆಬ್ಸೈಟ್: www.lesgroup.in
ಷೇರುದಾರರಿಗೆ ಸೂಚನೆ
1. ಲೀಪ್‌ಫ್ರಾಗ್ ಎಂಜಿನಿಯರಿಂಗ್ ಸರ್ವಿಸಸ್ ಲಿಮಿಟೆಡ್ (ಕಂಪನಿ)ಯ 21ನೇ ವಾರ್ಷಿಕ ಸಾಮಾನ್ಯ ಸಭೆಯು (AGM) ಶನಿವಾರ, ಸೆಪ್ಟೆಂಬರ್ 26, 2026 ರಂದು ಬೆಳಿಗ್ಗೆ 11.45 ಗಂಟೆಗೆ (IST) ವೀಡಿಯೋ ಕಾನ್ಫರೆನ್ಸಿಂಗ್ (VC) / ಇತರೆ ಆಡಿಯೋ-ವಿಷುವಲ್ ಮಾಧ್ಯಮ (OAVM) ಮೂಲಕ ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಈ ಸಭೆಯು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸಂಖ್ಯೆ: 3/2025 ಸೆಪ್ಟೆಂಬರ್ 22, 2025 ಹಾಗೂ ಭಾರತೀಯ ಷೇರುಪೇಟೆ ಮತ್ತು ವಿನಿಮಯ ಮಂಡಳಿ (SEBI) ಕಾಲಕಾಲಕ್ಕೆ ಹೊರಡಿಸಿರುವ ಸುತ್ತೋಲೆಗಳು (ಇನ್ನು ಮುಂದೆ ಒಟ್ಟಾಗಿ "ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ) ಮತ್ತು ಅನ್ವಯವಾಗುವ ಇತರೆ ಎಲ್ಲಾ ಕಾನೂನುಗಳಿಗೆ ಅನುಗುಣವಾಗಿ ನಡೆಯಲಿದ್ದು, ವಾರ್ಷಿಕ ಸಾಮಾನ್ಯ ಸಭೆ ನೋಟಿಸಿನಲ್ಲಿ ತಿಳಿಸಲಾಗುವ ವ್ಯವಹಾರಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ.
2. ಮೇಲ್ಕಂಡ ಸುತ್ತೋಲೆಗಳಿಗೆ ಅನುಗುಣವಾಗಿ, ವಾರ್ಷಿಕ ಸಾಮಾನ್ಯ ಸಭೆ ನೋಟಿಸ್ ಹಾಗೂ 2025-26ನೇ ಹಣಕಾಸು ವರ್ಷದ ವಾರ್ಷಿಕ ವರದಿಯನ್ನು, ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳು ಅವರೊಂದಿಗೆ ತಮ್ಮ ಇ-ಮೇಲ್ ವಿಳಾಸಗಳು ನೋಂದಾಯಿಸಿರುವ ಎಲ್ಲಾ ಷೇರುದಾರರಿಗೆ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಕಳುಹಿಸಲಾಗುತ್ತದೆ.
3. ವಾರ್ಷಿಕ ಸಾಮಾನ್ಯ ಸಭೆ ನೋಟಿಸ್ ಹಾಗೂ 2025-26ನೇ ಹಣಕಾಸು ವರ್ಷದ ವಾರ್ಷಿಕ ವರದಿಯನ್ನು ಕಂಪನಿಯ ವೆಬ್ಸೈಟ್ www.lesgroup.in ಷೇರು ವಿನಿಮಯ ಕೇಂದ್ರವಾದ ಬಿಎಸ್‌ಎ ಲಿಮಿಟೆಡ್‌ನ ವೆಬ್ಸೈಟ್ www.bseindia.com ಹಾಗೂ ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನ ವೆಬ್ಸೈಟ್ www.evoting.nsdl.com ನಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ.
4. ಕಂಪನಿ / ಡೆಪಾಸಿಟರಿಗಳೊಂದಿಗೆ ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸದಿರುವ ಷೇರುದಾರರಿಗೆ, 2025-26ನೇ ಹಣಕಾಸು ವರ್ಷದ ವಾರ್ಷಿಕ ವರದಿ ಲಭ್ಯವಿರುವ ವೆಬ್‌ಲಿಂಕ್ ಮತ್ತು ಅದರ ನಿಖರವಾದ ಮಾರ್ಗವನ್ನು ಒಳಗೊಂಡ ಪತ್ರವನ್ನು ಕಳುಹಿಸಲಾಗುತ್ತದೆ.
5. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಅಥವಾ ಕಂಪನಿಯೊಂದಿಗೆ ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸದಿರುವ ಷೇರುದಾರರು ಮತ ಚಲಾಯಿಸಲು ಮತ್ತು ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಲು ಸಾಧ್ಯವಿದೆ. ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗುವ ಹಾಗೂ ರಿಮೋಟ್ ಇ-ವೋಟಿಂಗ್ ಮತ್ತು ವಾರ್ಷಿಕ ಸಾಮಾನ್ಯ ಸಭೆ ಸಮಯದಲ್ಲಿ ಇ-ವೋಟಿಂಗ್ ಮೂಲಕ ಮತ ಚಲಾಯಿಸುವ ವಿವರವಾದ ಪ್ರಕ್ರಿಯೆಯನ್ನು ವಾರ್ಷಿಕ ಸಾಮಾನ್ಯ ಸಭೆ ನೋಟಿಸಿನಲ್ಲಿ ನೀಡಲಾಗುತ್ತದೆ.
6. ಕಂಪನಿ / ಡೆಪಾಸಿಟರಿಗಳೊಂದಿಗೆ ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸದಿರುವ ಷೇರುದಾರರು ಇ-ವೋಟಿಂಗ್‌ಗಾಗಿ ಬಳಕೆದಾರರ ಗುರುತು (User ID) ಮತ್ತು ಪಾಸ್‌ವರ್ಡ್ ಪಡೆಯಲು ಹಾಗೂ ಇ-ಮೇಲ್ ವಿಳಾಸವನ್ನು ನೋಂದಾಯಿಸಲು, ಕೆಳಗೆ ನೀಡಿರುವ ಹಂತಗಳನ್ನು ಅನುಸರಿಸುವಂತೆ ವಿನಂತಿಸಲಾಗಿದೆ.
a. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸಂದರ್ಭದಲ್ಲಿ, ದಯವಿಟ್ಟು ಷೇರುದಾರರ ಖಾತೆ ಸಂಖ್ಯೆ (Folio No.,) ಷೇರುದಾರರ ಹೆಸರು, ಷೇರು ಪ್ರಮಾಣಪತ್ರದ (ಮುಂಭಾಗ ಮತ್ತು ಹಿಂಭಾಗ) ಸ್ಕ್ಯಾನ್ ಮಾಡಿದ ಪ್ರತಿ, ಪ್ಯಾನ್ ಕಾರ್ಡ್ (ಸ್ವಯಂ ದೃಢೀಕರಿಸಿದ ಪ್ಯಾನ್ ಕಾರ್ಡನ ಸ್ಕ್ಯಾನ್ ಮಾಡಿದ ಪ್ರತಿ) ಹಾಗೂ ಆಧಾರ್ (ಸ್ವಯಂ ದೃಢೀಕರಿಸಿದ ಆಧಾರ್ ಕಾರ್ಡ್‌ನ ಸ್ಕ್ಯಾನ್ ಮಾಡಿದ ಪ್ರತಿ) ಇವುಗಳನ್ನು CS@lesgroup.in ಇ-ಮೇಲ್ ವಿಳಾಸಕ್ಕೆ ಕಳುಹಿಸಬೇಕು.
b. ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸಂದರ್ಭದಲ್ಲಿ, ದಯವಿಟ್ಟು ನಿಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್ (DP) ಅವರನ್ನು ಸಂಪರ್ಕಿಸಿ ಮತ್ತು ಡೆಪಾಸಿಟರಿ ಪಾರ್ಟಿಸಿಪೆಂಟ್(ಗಳು) ಸೂಚಿಸಿರುವ ಪ್ರಕ್ರಿಯೆಯಂತೆ ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಇ-ಮೇಲ್ ವಿಳಾಸವನ್ನು ನೋಂದಾಯಿಸಿ / ನವೀಕರಿಸಬೇಕು.
7. 21ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸ್ ಅನ್ನು ಅನ್ವಯವಾಗುವ ಕಾನೂನುಗಳಿಗೆ ಅನುಗುಣವಾಗಿ, ಸೂಕ್ತ ಸಮಯದಲ್ಲಿ ಷೇರುದಾರರಿಗೆ ಕಳುಹಿಸಲಾಗುತ್ತದೆ.
ಲೀಪ್‌ಫ್ರಾಗ್ ಇಂಜಿನಿಯರಿಂಗ್ ಸರ್ವಿಸಸ್ ಲಿಮಿಟೆಡ್ ಪರವಾಗಿ
ಸಹಿ/-
ಸ್ನೇಹಾ ಹೆಗಡೆ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ
ದಿನಾಂಕ: 27.08.2026
ಸ್ಥಳ: ಬೆಂಗಳೂರು

## 2 ತಿಂಗಳಲ್ಲಿ 75 ಲಕ್ಷ ಮಾನವ ದಿನಗಳ ಸೃಜನೆ: ಸಚಿವ ಖಂಡ್ರೆ

■ **ಉದಯವಾಣಿ ಸಮಾಚಾರ**

**ಬೆಂಗಳೂರು:** ವಿಕಸಿತ ಭಾರತ-ಗ್ಯಾರಂಟಿ ಫಾರ್ ರೋಜ್‌ಗಾರ್ - ಆಜೀವಿಕಾ ಮಿಷನ್ (ವಿಬಿ- ಜಿ ರಾಮ್‌ಜಿ) ಯೋಜನೆಯಲ್ಲಿ ಕಳೆದ 2 ತಿಂಗಳಲ್ಲಿ ಸುಮಾರು 75 ಲಕ್ಷ ಮಾನವ ದಿನಗಳ ಸೃಜನೆಯಾಗಿದ್ದು, ಕಳೆದ ವರ್ಷ ನರೇಗಾ ಯೋಜನೆಯಲ್ಲಿ ಸೃಜನೆಯಾಗಿದ್ದ ಮಾನವ ದಿನಗಳನ್ನು ಮೀರುವ ಭರವಸೆಯಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು



ಪಂಚಾಯತ್ ರಾಜ್ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಮಾತನಾಡಿ, ನರೇಗಾ ಅಡಿಯಲ್ಲಿ ರಾಜ್ಯದಲ್ಲಿ ಒಟ್ಟು 187 ಕೋಟಿ ಮಾನವ ದಿನ ಸೃಜನೆ ಮಾಡಲಾಗಿತ್ತು. ಆಗ ಕೇಂದ್ರ ಸರ್ಕಾರ ಶೇ.90, ರಾಜ್ಯ ಸರ್ಕಾರ ಶೇ.10ರಷ್ಟು ಭರಿಸುತ್ತಿತ್ತು. ಈಗ ಶೇ.40ರಷ್ಟು ಹಣ ರಾಜ್ಯ ಸರ್ಕಾರವೇ ಭರಿಸಬೇಕಾಗಿದೆ. ಈಗ ಪೂರಕ ಅಂದಾಜಿನಲ್ಲಿ 3800 ಕೋಟಿ ರೂ. ನೀಡಲಾಗಿದೆ. ಕೇಂದ್ರದಿಂದ 5,709 ಕೋಟಿ ರೂ. ಬರಲಿದ್ದು, ಯಾರೊಬ್ಬರೂ ಗುಳೆ ಹೋಗದಂತೆ ಗ್ರಾಮೀಣ ಜನರಿಗೆ ಉದ್ಯೋಗ ನೀಡಲು ಕ್ರಮ ವಹಿಸಲಾಗಿದೆ ಎಂದರು. ಜುಲೈ 1ರಿಂದ ಆರಂಭವಾದ ಜಿ ರಾಮ್‌ಜಿ ಯೋಜನೆಯಲ್ಲಿ ಪ್ರತಿದಿನ 50 ಸಾವಿರ ಮಾನವ ದಿನ ಸೃಜನೆಯಾಗಿತ್ತು. ಈಗ 3ಲಕ್ಷಕ್ಕೂ ಅಧಿಕ ದಿನ ಸೃಜನೆಯಾಗುತ್ತಿದೆ. ಜುಲೈ 1ರಿಂದ ಇಲ್ಲಿಯವರೆಗೆ 74.7 ಲಕ್ಷ ಮಾನವ ದಿನ ಸೃಜನೆಯಾಗಿದೆ. ನಿತ್ಯ 5 ಲಕ್ಷ ಮಾನವ ದಿನ ನಮ್ಮ ಗುರಿಯಾಗಿದೆ. ಕಳೆದ ವರ್ಷವಿಡೀ 91 ಲಕ್ಷ ಮಾನವ ದಿನಗಳ ಸೃಜನೆಯಾಗಿತ್ತು ಎಂದರು.





ವಚನಜ್ಯೋತಿ ಬಳಗದಿಂದ ವಚನ ಶ್ರಾವಣದ 14 ದಿನದ ಕಾರ್ಯಕ್ರಮ ಮಾಗಡಿ ಮುಖ್ಯರಸ್ತೆಯ ಅಂಧ್ರಹಳ್ಳಿಯ ನಾಟ್ಯ ಸನ್ನಿಧಿಯಲ್ಲಿ ನಡೆಯಿತು. ಬಳಗದ ಅಧ್ಯಕ್ಷ ಪಿನಾಕಪಾಣಿ, ಕನ್ನಡ ಹಾಗೂ ಸಂಸ್ಕೃತಿ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಬಿ.ಎಸ್. ಶಿವಪ್ರಕಾಶ್, ನಾಟ್ಯ ಸನ್ನಿಧಿಯ ಡಾ.ಮೋನಿಷಾ ನವೀನ್, ಬಸವರಾಜು, ಮೂರ್ತಿ ಸೇರಿ ವಿದ್ಯಾರ್ಥಿಗಳು ಇದ್ದರು.

## ವೇತನ ಹೆಚ್ಚಳ ಕೋರಿದ ಎಇಇ ಅರ್ಜಿ ವಿಚಾರಣೆ: ಕೆಪಿಟಿಸಿಎಲ್‌ಗೆ ನೋಟಿಸ್

■ **ಉದಯವಾಣಿ ಸಮಾಚಾರ**

**ಬೆಂಗಳೂರು:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್)ದಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್(ಎಲೆಕ್ಟ್ರಿಕಲ್) ಆಗಿ ಸೇವೆ ಸಲ್ಲಿಸುತ್ತಿರುವವರ ವೇತನ ಹೆಚ್ಚಳ ಕೋರಿ ಸಲ್ಲಿಸಲಾದ ಅರ್ಜಿ ಸಂಬಂಧ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಈ ವಿಚಾರವಾಗಿ ಬೆಸ್ಕಾಂ ಬೆಂಗಳೂರು ಕಾರ್ಪೊರೇಟ್ ಕಚೇರಿಯಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್(ಎಲೆಕ್ಟ್ರಿಕಲ್) ಆಗಿ ಸೇವೆ ಸಲ್ಲಿಸುತ್ತಿರುವ ಎಸ್.ಪ್ರಕಾಶ್ ಕುಮಾರ್ ಸೇರಿ ರಾಜ್ಯದ ವಿವಿಧೆಡೆ ಸೇವೆ ಸಲ್ಲಿಸುತ್ತಿರುವ 157 ಮಂದಿ ಎಇಇ(ಎಲೆಕ್ಟ್ರಿಕಲ್)ಗಳು ಸಲ್ಲಿಸಿರುವ ಅರ್ಜಿಯು ನ್ಯಾ.ಅಶೋಕ್ ಎಸ್. ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಗುರುವಾರ ವಿಚಾರಣೆಗೆ ಬಂದಿತ್ತು. ಅರ್ಜಿ ಆಲಿಸಿದ ನ್ಯಾಯಪೀಠ, ಕೆಪಿಟಿಸಿಎಲ್‌ಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ಮುಂದೂಡಿತು. ಕೆಪಿಟಿಸಿಎಲ್ ಮಂಡಳಿಯ 2008ರ ಜೂನ್ 2ರ ನಿರ್ಧಾರದಂತೆ 2003ರ ಏ.1ರಿಂದ ಪೂರ್ವಾನ್ವಯವಾಗುವಂತೆ ಮೂಲ ವೇತನಕ್ಕೆ ಹೆಚ್ಚುವರಿಯಾಗಿ ಶೇ.2ರಷ್ಟು ವೇತನ ಏರಿಕೆ ಮಾಡಿ ವೇತನ ಮರು ನಿಗದಿಪಡಿಸಬೇಕು. ಅದಕ್ಕೆ ತಕ್ಕಂತೆ ಹಿಂಬಾಕಿ, ಇತರೆ ಭತ್ಯೆ ಮಂಜೂರಿಗೆ ನಿರ್ದೇಶನ ನೀಡಲು ಅರ್ಜಿಯಲ್ಲಿ ಕೋರಲಾಗಿದೆ.

## ವಿದ್ಯಾರ್ಥಿ ಸಂಘಟನೆಗಳಿಗೆ ಚುನಾವಣೆ ನಿಷೇಧ ಪ್ರಸ್ತಾಪಕ್ಕೆ ವಿರೋಧ

■ **ಉದಯವಾಣಿ ಸಮಾಚಾರ**

**ಬೆಂಗಳೂರು:** ಪಿಯು ಹಾಗೂ ಪದವಿ ಕಾಲೇಜುಗಳಲ್ಲಿ ನಡೆಯಲಿರುವ ವಿದ್ಯಾರ್ಥಿ ಸಂಘದ ಚುನಾವಣೆಯಿಂದ ವಿದ್ಯಾರ್ಥಿ ಸಂಘಟನೆಗಳನ್ನು ನಿಷೇಧಿಸಲು ಹೊರಟಿರುವ ರಾಜ್ಯ ಸರ್ಕಾರದ ನಡೆಯನ್ನು ಎಐಡಿಎಸ್‌ಓ ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಎಐಡಿಎಸ್‌ಓ ರಾಜ್ಯ ಸಮಿತಿಯ ಕಾರ್ಯದರ್ಶಿ ಅಜಯ್ ಕಾಮತ್, ಕಾಲೇಜಿನ ಸಮಸ್ಯೆಗಳನ್ನು ಬಗೆಹರಿಸುವ ಅಸ್ತ್ರವಾಗಿ ವಿದ್ಯಾರ್ಥಿ ಸಂಘಗಳು ಕಾರ್ಯ ನಿರ್ವಹಿಸಬೇಕು. ಸಂಘಟನೆಗಳನ್ನೇ ನಿಷೇಧಿಸಿದರೆ ವಿದ್ಯಾರ್ಥಿಗಳ ಸಂಘಟಿತ ಆಂದೋಲನ ಹಿನ್ನಡೆ ಅನುಭವಿಸುತ್ತದೆ ಎಂದರು. ಸರ್ಕಾರದ ಈ ನಡೆ ವಿರೋಧಿಸಿ ಪ್ರಬಲ ಚಳುವಳಿ ಕಟ್ಟಬೇಕೆಂದು ಎಐಡಿಎಸ್‌ಓ ವಿದ್ಯಾರ್ಥಿಗಳಿಗೆ ಕರೆ ನೀಡಿದೆ. ಯಾವುದೇ ವಿದ್ಯಾರ್ಥಿ ಸಂಘಟನೆಗಳನ್ನು ಕಾಲೇಜುಗಳ ಕ್ಯಾಂಪಸ್ ಒಳಗೆ ಬರದಂತೆ ತಡೆಯುವ ಸರ್ಕಾರದ ಆಲೋಚನೆ ನಿಜಕ್ಕೂ ಅಪೇಕ್ಷಣೀಯವಲ್ಲ ಎಂದು ಹೇಳಿದ್ದಾರೆ.

## ಇಂದಿನ ಆಮಂತ್ರಣ

ಆ. 28


■ **ಕರ್ನಾಟಕ ರಾಜ್ಯ ಸರ್ಕಾರಿ ಎಸ್ಸಿ/ಎಸ್ಟಿ ನೌಕರರ ಸಮನ್ವಯ ಸಮಿತಿ:** 6ನೇ ರಾಜ್ಯ ಮಟ್ಟದ ಐಕ್ಯತಾ ಸಮಾವೇಶ, ಉದ್ಘಾಟನೆ: ಸಿಎಂ ಡಿ.ಕೆ.ಶಿವಕುಮಾರ್, ಅಧ್ಯಕ್ಷತೆ: ಡಿಸಿಎಂ ಡಾ.ಜಿ.ಪರಮೇಶ್ವರ್. ದಿಕ್ಸೂಚಿ ಭಾಷಣ: ಮಾಜಿ ಸಿಎಂ ಸಿದ್ದರಾಮಯ್ಯ. ಸ್ಥಳ: ಗೇಟ್ ನಂ.8, ಶೃಂಗಾರ್ ಪ್ಯಾಲೇಸ್, ಅರಮನೆ ಮೈದಾನ. ಬೆಳಗ್ಗೆ 10.30ಕ್ಕೆ

■ **ಶ್ರೀನಿವಾಸ ಕಲ್ಯಾಣ ಮಹೋತ್ಸವ ಸಮಿತಿ:** ಶ್ರೀನಿವಾಸ ಕಲ್ಯಾಣ



ಮಹೋತ್ಸವ ಮತ್ತು 17ನೇ ವಾರ್ಷಿಕೋತ್ಸವ ಕಾರ್ಯಕ್ರಮ. ಮುಖ್ಯ ಅತಿಥಿ: ಸಚಿವ ರಾಮಲಿಂಗಾರೆಡ್ಡಿ, ಶಾಸಕ ಸತೀಶ್ ರೆಡ್ಡಿ. ಸ್ಥಳ: ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ (ಶಿರಡಿ ಸಾಯಿ ಬಾಬಾ ಮಂದಿರದ ಎದುರು) 19ನೇ ಮುಖ್ಯರಸ್ತೆ, 2ನೇ ಸೆಕ್ಟರ್, ಎಚ್.ಎಸ್.ಆರ್. ಬಡಾವಣೆ. ಮಧ್ಯಾಹ್ನ 2ಕ್ಕೆ.

■ **ಕರ್ನಾಟಕ ರಾಜ್ಯ ಒಕ್ಕಲಿಗರ ಹಿತರಕ್ಷಣ ಪರಿಷತ್, ಬೆಂಗಳೂರು:** ಜೈ ಜವಾನ್, ಜೈ ಕಿಸಾನ್ ರಾಷ್ಟ್ರೀಯ ಪ್ರಶಸ್ತಿ 2026 ಪ್ರದಾನ ಸಮಾರಂಭ. ಸಾನ್ನಿಧ್ಯ: ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಮುಖ್ಯ ಅತಿಥಿ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಒಕ್ಕಲಿಗರ ಹಿತರಕ್ಷಣ ಪರಿಷತ್ ಕಾರ್ಯಾಧ್ಯಕ್ಷ ಬೇಸಗರಹಳ್ಳಿ ಶಿವಲಿಂಗಯ್ಯ. ಸ್ಥಳ; ಎನ್.ಜಿ.ಓ. ಸಭಾಂಗಣ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ. ಬೆಳಗ್ಗೆ 11.30ಕ್ಕೆ.



■ **ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಳಿ:** ರಾಷ್ಟ್ರೀಯ ಕೈಮಗ್ಗ



ಮೇಳ-2026. ಉದ್ಘಾಟನೆ: ಸಿಎಂ ಡಿ.ಕೆ.ಶಿವಕುಮಾರ್. ಉಪಸ್ಥಿತಿ: ಡಿಸಿಎಂ ಡಾ.ಜಿ. ಪರಮೇಶ್ವರ. ಮುಖ್ಯ ಅತಿಥಿ: ಪ್ರತಿ ಪಕ್ಷದ ನಾಯಕ ಆರ್.ಅಶೋಕ್. ಅಧ್ಯಕ್ಷತೆ: ಶಾಸಕ ಮುನಿರತ್ನ. ಸ್ಥಳ: ಎಚ್.ಎಂ.ಟಿ.ಆಟದ ಮೈದಾನ, ಜಾಲಹಳ್ಳಿ ಮುಖ್ಯ ರಸ್ತೆ, ಕದಂಬ ಗಾರ್ಡೇನಿಯಾ ಎದುರು. ಸಂಜೆ 4ಕ್ಕೆ.

■ **ಕುವೆಂಪು ಭಾಷಾ ಭಾರತಿ ಪ್ರಾಧಿಕಾರ:** ತಿಂಗಳ ಉಪನ್ಯಾಸ ಕಾರ್ಯಕ್ರಮ. ವಿಷಯ: ಭಾರತೀಯ ಪರಂಪರೆಯಲ್ಲಿ ಅನುವಾದದ ಪರಿಕಲ್ಪನೆ. ಉಪನ್ಯಾಸ: ಕವಿ, ನಾಟಕಕಾರ, ಅನುವಾದಕ ಪ್ರೊ. ಎಚ್.ಎಸ್.ಶಿವಪ್ರಕಾಶ್. ಅಧ್ಯಕ್ಷತೆ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ.ಚನ್ನಪ್ಪ ಕಟ್ಟಿ. ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ ಆವರಣ ಮಲ್ಲತ್ತಹಳ್ಳಿ, ಕಲಾಗ್ರಾಮ. ಸಂಜೆ 5 ಗಂಟೆಗೆ.

■ **ರಾಗಿಗುಡ್ಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತ ಮಂಡಳಿ ಟ್ರಸ್ಟ್:** 26ನೇ ವರ್ಷದ ಪ್ರವಚನ ವಾಹಿನಿ ಅಂಗವಾಗಿ ಮರ್ಯಾದ ಪುರುಷೋತ್ತಮ ಶ್ರೀ ರಾಮ ಕುರಿತು ರಾಮಾಯಣ ಪ್ರಸರಣ ಕೇಂದ್ರದ ನಿರ್ದೇಶಕ ಸುರೇಶ್ ಕುಮಾರ್ ಅವರಿಂದ ಉಪನ್ಯಾಸ ಕಾರ್ಯಕ್ರಮ. ಸ್ಥಳ: ಸಾಂಸ್ಕೃತಿಕ ಮಂದಿರ, 2ನೇ ಹಂತ, ಜಯನಗರ. ಸಂಜೆ 6.30ಕ್ಕೆ.

■ **ಶ್ರೀ ಗುರು ರಾಘವೇಂದ್ರ ಸೇವಾ ಸಮಿತಿ:** ರಾಘವೇಂದ್ರ ಸ್ವಾಮಿಗಳ ಆರಾಧನಾ ಪ್ರಯುಕ್ತ ವೇಣು ಗಾನ ಲಹರಿ ಕಾರ್ಯಕ್ರಮ. ವೇಣು ವಾದನ : ಶ್ರೀ ಆನಂದತೀರ್ಥ, ಗಾಯನ : ಕು. ಅವನಿ ಭಟ್. ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ 6ನೇ ಅಡ್ಡರಸ್ತೆ, ಪ್ರಕಾಶನಗರ. ಸಂಜೆ 6.30ಕ್ಕೆ.